# ಘನಲಿಂಗಿ ಶಿವಯೋಗಿ

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ|
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ||
ವೀ ಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ|
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ||

— ಸಿ.ಶಿ. V. ೧೫-೧೬

ಅನಾದಿಕಾಲದಿಂದಲೂ ಸೃಷ್ಟಿಯ ವೈಚಿತ್ರ್ಯಗಳ ಬಗ್ಗೆ ಮಾನವನಿಗೆ ಅಪಾರವಾದ ಜಿಜ್ಞಾಸೆ. ಈ ಜ್ಞಾನಪಿಪಾಸೆಯೇ ಧರ್ಮಗಳ ವಿವೇಚನೆಗೆ ಮೂಲವಾಯಿತು, ಭಗವಚ್ಚಿಂತನೆಗೆ ಎಡೆಮಾಡಿತು, ತತ್ತ್ವಗಳ ಪ್ರತಿಪಾದನೆಗೆ ಪಥವಾಯಿತು. ಕಾಲಕ್ರಮೇಣ ಆಚಾರ್ಯರು ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳ ಸಿದ್ಧಾಂತಗಳನ್ನು ಮಂಡಿಸಿದರು. ಈ ಎಲ್ಲ ಚಿಂತನ-ಮನನಗಳನ್ನು ಮಥಿಸಿದ ವೀರಶೈವರು ಅಂತಿಮವಾಗಿ ಶಕ್ತಿವಿಶಿಷ್ಟಾದ್ವೈತವೆಂಬ ಸಿದ್ಧಾಂತವನ್ನು ರೂಪಿಸಿದರು.

**'ಶಕ್ತಿಶ್ಚ ಶಕ್ತಿಶ್ಚ ಶಕ್ತೀ ತಾಭ್ಯಾಂ ವಿಶಿಷ್ಟೌ ಜೀವೇಶೌ ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಮ್'**

ಶಿವನು ತನ್ನಲ್ಲಿ ಅವಿನಾಭಾವದಿಂದಿರುವ ಶಕ್ತಿಯ ಸಹಾಯ ದಿಂದ ಜಗತ್ತನ್ನು ಲೀಲೆಗಾಗಿ ಸೃಷ್ಟಿಸುತ್ತಾನೆ. ತಾನು ನಿರ್ಲಿಪ್ತನೂ, ನಿರಂಜನ ಸ್ವರೂಪಿಯೂ ಆಗಿರುತ್ತಾನೆ. ಇಲ್ಲಿ ಸೃಷ್ಟಿಯೂ ಸತ್ಯ, ಜೀವರೂ ಸತ್ಯ. ಆದರೆ ಇವೆರಡೇ ಅಂತಿಮ ಸತ್ಯವಲ್ಲ. ಪರಶಿವನೇ ಪರತತ್ತ್ವವಾಗಿ ನಿಲ್ಲತಕ್ಕವನು. ಈ ತರ್ಕದ ಹಿನ್ನೆಲೆಯಲ್ಲಿ ವೀರಶೈವ ಧರ್ಮವು ಶಕ್ತಿವಿಶಿಷ್ಟಾದ್ವೈತ ನಿಲುವನ್ನು ಹೊಂದಿದೆ.

ಆಗಮಗಳ ತಳಹದಿಯ ಮೇಲೆ ರೂಪಿತವಾದ ವೀರಶೈವ ಧರ್ಮವು

ಎಲ್ಲ ಶೈವ ಸಿದ್ಧಾಂತಗಳ ಒಳ್ಳೆಯ ಅಂಶಗಳನ್ನು ಒಳಗೊಂಡಿದೆ. ತಾತ್ತ್ವಿಕ ವಿವೇಚನೆ, ಧಾರ್ಮಿಕ ಆಚರಣೆ ಹಾಗೂ ನೈತಿಕ ನಿಯಮಗಳು ಇಲ್ಲಿ ಷಟ್ಸ್ಥಲ, ಅಷ್ಟಾವರಣ ಹಾಗೂ ಪಂಚಾಚಾರ ಗಳೆಂಬ ಅಂಕಿತ ಗಳಿಂದ ಮುಪ್ಪುರಿಗೊಂಡಿವೆ.

ಹಿನ್ನೆಲೆ : ಅತಿ ಪ್ರಾಚೀನವಾದ ವೀರಶೈವಧರ್ಮದಲ್ಲಿ ಇಹ-ಪರಗಳೆರಡರ ಸಮನ್ವಯ, ಭಕ್ತಿ-ಜ್ಞಾನ-ಕ್ರಿಯೆಗಳ ಸಮನ್ವಯ ವಿಶೇಷವಾಗಿ ಕಾಣಬರುತ್ತದೆ. ಸಕಲ ಜೀವಾವಳಿಗೆ ಲೇಸ ಬಯಸುವ ಯಾವ ಮನುಜನಾದರೂ ವೀರಶೈವದೀಕ್ಷೆಯನ್ನು ತೆಗೆದುಕೊಳ್ಳ ಬಲ್ಲನು. ಇಂತಹ ವೀರಶೈವಧರ್ಮವು ಪರಮ ಉಚ್ಛ್ರಾಯ ಸ್ಥಿತಿ ಯನ್ನು ತಲುಪಿದುದು ಹನ್ನೆರಡನೆಯ ಶತಮಾನದಲ್ಲಿ.

ಹನ್ನೆರಡನೆಯ ಶತಮಾನವು ಸುವರ್ಣಾಕ್ಷರದಲ್ಲಿ ಬರೆದಿಡ ಬೇಕಾದ ಸಮಯ. ಕರ್ನಾಟಕದ ಬಾಗೇವಾಡಿಯಲ್ಲಿ ಬಸವಣ್ಣನೆಂಬ ಕಾರಣ ಪುರುಷನು ಉದಯಿಸಿದ ಕಾಲವದು. ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ರಾಂತಿಯ ಬೀಜಗಳನ್ನು ಜನಮನದಲ್ಲಿ ಬಿತ್ತುತ್ತಾ ಜೊತೆಗೆ ಅಂತರಂಗ ಸಾಧನೆಯಲ್ಲಿ ಆಸಕ್ತವಾದ ಮಹಾಚೈತನ್ಯ ಬಸವಣ್ಣನವರದು. ಆ ಹೊಂಬೆಳಕಿನ ಆಶ್ರಯದಲ್ಲಿ ಭಾರತದ ಎಲ್ಲೆಡೆಗಳಿಂದ ಆಗಮಿಸಿದ ನೂರಾರು, ಸಾವಿರಾರು ಶರಣ-ಶರಣೆಯರು ಒಂದುಗೂಡಿದರು. ಅಲ್ಲಿ ಜಾತಿ-ಮತ ಭೇದವಿರಲಿಲ್ಲ; ಮೇಲು-ಕೀಳು ಭಾವವಿರಲಿಲ್ಲ; ಸ್ತ್ರೀ-ಪುರುಷರೆಂಬ ಅಂತರವಿರಲಿಲ್ಲ. ಸಮಗಾರನಿಂದ ಮೊದಲ್ಗೊಂಡು ಮಹಾಮಂತ್ರಿಯವರೆಗಿನ ಎಲ್ಲ ಸತ್ಯಶುದ್ಧ ಕಾಯಕಜೀವಿಗಳಿಗೆ ಸಮಾನ ಮನ್ನಣೆಯು ದೊರೆಯಿತು. ಇಷ್ಟಲಿಂಗೋಪಾಸಕರಾದ ಅವರು ಸಮಾಜದಲ್ಲಿ ಕೆಳಸ್ತರದವರೆಂದು ಶೋಷಿತರಾದ ಜನರಲ್ಲಿ ಆತ್ಮ ವಿಶ್ವಾಸ, ಧೈರ್ಯಗಳೆಂಬ ಹೊಸ ಉಸಿರನ್ನು ತುಂಬಿದರು.

'ನ ಭೂತೋ ನ ಭವಿಷ್ಯತಿ' ಎಂಬ ಆ ಸುವರ್ಣಯುಗದಲ್ಲಿ ಯುಗಪ್ರವರ್ತಕರಾಗಿ, ಶರಣಸಂಕುಲದಲ್ಲಿ ಭಕ್ತಿಶೀಲ, ಕ್ರಿಯಾಶೀಲ,

ಜ್ಞಾನಶೀಲರೆಂಬ ಬೆಳೆಯನ್ನು ಹುಲುಸಾಗಿ ಬೆಳೆಯಿಸಿದ ಧೀಮಂತ ಅದ್ಭುತ ಕಾರ್ಯವನ್ನು ಬಸವಣ್ಣನವರು ಲೀಲೆಯಂತೆ ಕೈಗೊಂಡರು. ನಾಡಿನ ಪ್ರಮುಖ ಧರ್ಮವೊಂದರ ನೇತಾರರಾದರೂ ಅವರು ಧಾರ್ಮಿಕ ಸಂಕುಚಿತ ಮನೋಭಾವವನ್ನು ತೋರಲಿಲ್ಲ. ಭವ್ಯ ಭವಿಷ್ಯ ದತ್ತ ಮೊಗ ಮಾಡಿ ದುಡಿಯಲು ಕಂಕಣಬದ್ಧರಾಗಿ ಉಳಿದವರಿಗೆ ಸ್ಫೂರ್ತಿಯ ಬತ್ತದ ಸೆಲೆಯಾದರು.

ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ ಮೊದ ಲಾದ ಪ್ರಮುಖ ಶಿವಶರಣ-ಶರಣೆಯರು ಬಸವಣ್ಣನವರ ಮಹತ್ವಾ ಕಾಂಕ್ಷೆಯ ಹೊಣೆಗಾರಿಕೆಯನ್ನು ಹಂಚಿಕೊಂಡರು. **'ಕಾಯಕವೇ ಕೈಲಾಸ'** ಎಂಬ ಕೂಗು ಮನೆ-ಮನೆಗಳಲ್ಲಿ ಮಾರ್ದನಿಗೊಂಡಿತು.

ಸಮಾಜವು ಆಮೂಲಾಗ್ರವಾಗಿ ಸುಧಾರಣೆಯಾಗಬೇಕೆಂದು ಶರಣರು ಸಂಕಲ್ಪಿಸಿದಾಗ, ಅವರು ಅನುಭವಿಸಿದ ಸಕಾರಾತ್ಮಕ ಹಾಗೂ ನಕಾರಾತ್ಮಕ ಪ್ರತಿಕ್ರಿಯೆಗಳನ್ನು ಪರಸ್ಪರ ಹಂಚಿಕೊಳ್ಳಬಯಸಿದರು. ಹಾಗೆ ತಾನಾಗಿಯೇ ಜನರಿಂದ, ಜನರಿಗಾಗಿ ಮೂಡಿದ ಸಾಹಿತ್ಯಪ್ರಕಾರ ವಚನ ಎನ್ನಬಹುದು. ಈ ಸಾಮೂಹಿಕ ಸಾಹಿತ್ಯಕ ಚಳವಳಿಗೆ ಶರಣರು ತಮ್ಮ ಶಕ್ತ್ಯನುಸಾರ, ಭಾವಾನುಸಾರ, ಭಕ್ತ್ಯನುಸಾರ ವಚನಸಾಹಿತ್ಯಕ್ಕೆ ವೈಯಕ್ತಿಕ ಕಾಣಿಕೆಗಳನ್ನು ಶ್ರದ್ಧಾಪೂರ್ವಕವಾಗಿ ಸಮರ್ಪಿಸಿದರು.

**'ವಚನ'** ಪದಕ್ಕೆ ಸಂಸ್ಕೃತ ನಿಘಂಟುವಿನಲ್ಲಿ ಮಾತು, ಉಪನ್ಯಾಸ, ಅರ್ಥವನ್ನು ಕೊಡುವ ಶಬ್ದ, ಸಂಖ್ಯೆಯನ್ನು ಹೇಳುವ ಪ್ರತ್ಯಯ ಮೊದಲಾದ ಅರ್ಥಗಳಿವೆ. ಕನ್ನಡದಲ್ಲಿ **'ಗದ್ಯ'** ಎನ್ನುವ ಅರ್ಥವೂ ರೂಢಿಯಲ್ಲಿದೆ. ರೂಢಿಗತ ಅಂಧಶ್ರದ್ಧೆಗಳನ್ನು ಪ್ರತಿಭಟಿಸುವ ವಚನ ಪ್ರಕಾರವೂ ಸಾಹಿತ್ಯಕ ದೃಷ್ಟಿಯಿಂದ ಪ್ರತಿಭಟನಾತ್ಮಕವೇ. ಅಂದು ಬಳಕೆಯಲ್ಲಿದ್ದ ಚಂಪೂ ಶೈಲಿಯನ್ನು ಧಿಕ್ಕರಿಸಿ ಸಾಮಾನ್ಯರ ಸಹಜ ಆಡುನುಡಿಗಳಲ್ಲಿ ವಚನಗಳನ್ನು ಶರಣರು ರಚಿಸಿದರು. ಅಂದಿನವರೆಗೆ

ರಾಜಾಶ್ರಯದಲ್ಲಿದ್ದ ಕನ್ನಡ ಸಾಹಿತ್ಯ ಜನಾಶ್ರಯವನ್ನು ಹೊಂದಿದುದು ವಚನಗಳ ಮುಖಾಂತರ. ನಿರ್ದಿಷ್ಟ ಛಂದೋರೂಪವಿರದಿದ್ದರೂ ಲಯವು ತಾನಾಗಿಯೇ ಸೇರಿ, ಗದ್ಯದ ಸರಳತೆಯನ್ನು, ಪದ್ಯದ ಲಾಲಿತ್ಯವನ್ನು ವಚನವು ಮೇಳೈಸಿಕೊಳ್ಳಲು ಪೂರಕವಾಗಿದೆ.

ಬಸವಣ್ಣನವರಿಗಿಂತ ಹಿಂದೆಯೇ ವಚನಸೃಷ್ಟಿಯು ಪ್ರಾರಂಭವಾಗಿರುವುದಕ್ಕೆ ದೇವರ ದಾಸಿಮಯ್ಯನ ವಚನಗಳು ಸಾಕ್ಷಿಯಾಗಿವೆ. ದಾಸಿಮಯ್ಯನು ಸಹ ತನ್ನ ವಚನವೊಂದರಲ್ಲಿ 'ನಿಮ್ಮ ಶರಣರ ಸೂಳ್ನುಡಿಯನೊಂದರೆಗಳಿಗೆಯಿತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ' ಎಂದು ಹಿಂದಿನ ಶಿವಶರಣರಾದ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಕೆಂಭಾವಿ ಭೋಗಯ್ಯರ ಬಗ್ಗೆ ಸೂಚನೆ ನೀಡಿದ್ದಾನೆ. ಆದರೂ ಬಸವಣ್ಣನವರ ಕಾಲದಲ್ಲಿ ವಚನವು ಉಚ್ಛ್ರಾಯ ಸ್ಥಿತಿಗೇರಿತು ಎಂದು ಹೇಳಬಹುದು.

'೩೦-೪೦ ವರ್ಷಗಳ ಅವಧಿಯಲ್ಲಿ ೩೫೦ಕ್ಕೆ ಮೇಲ್ಪಟ್ಟು ವಚನಕಾರರು ಅದರಲ್ಲೂ ೩೦ಕ್ಕೆ ಮೇಲ್ಪಟ್ಟು ಸ್ತ್ರೀಯರು ತಮ್ಮ ಅನುಭವ, ಆಲೋಚನೆಗಳನ್ನು ತಮ್ಮ ಪರಿಭಾಷೆ ಮತ್ತು ರೀತಿಗಳಲ್ಲಿ ವ್ಯಕ್ತಪಡಿಸಿದ ರೆಂಬುದೇ ನನಗೆ ಮೊದಲನೆಯ ಮಹತ್ವದ್ದು. ಸಮಾಜದ ಬೇರೆ ಬೇರೆ ವರ್ಗದ ಜನ ಕೃತಿರಚನೆ ಮಾಡಿರುವುದಂತೂ, ಆಧುನಿಕ ಕಾಲವನ್ನು ಬಿಟ್ಟರೆ, ಜಗತ್ತಿನ ಇತಿಹಾಸದಲ್ಲಿ ಅನನ್ಯವೆಂದು ನನ್ನ ನಂಬಿಕೆ'[೧] ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಸಂಸ್ಕೃತ- ಹಳೆಗನ್ನಡವನ್ನು ಅರಿಯದವರಿಗೆ ಅಕ್ಕರೆಯ ತಿಳಿಗನ್ನಡದಲ್ಲಿ ಸರ್ವಾಂಗೀಣ ಪ್ರಜ್ಞೆಯನ್ನು ಪಡಿಮೂಡಿಸಿದ ಗರಿಮೆ ಹನ್ನೆರಡನೆಯ ಶತಮಾನದ ಶರಣರಿಗೆ ಸಲ್ಲಬೇಕು.

ಬಳಿಕ ಸುಮಾರು ೩೦೦ ವರ್ಷಗಳ ಅಂತರದಲ್ಲಿ ಹೊರನೋಟಕ್ಕೆ ವೀರಶೈವ ಕ್ರಾಂತಿಯು ದಿವ್ಯ ಮೌನ ತಳೆದಂತೆ ಗೋಚರಿಸಿದರೂ,

೧. ವಚನ ಸಾಹಿತ್ಯ — ಎಂ. ಚಿದಾನಂದಮೂರ್ತಿ, ಪು. ೧೬೨

ಗುಪ್ತಗಾಮಿನಿಯಂತೆ ಹರಿಯುತ್ತಲಿತ್ತು. ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳಲ್ಲಿ ಶರಣರ ಜೀವನ ಸಾಧನೆಗಳನ್ನು ಕುರಿತ ಕಾವ್ಯಗಳ ರಚನೆಯಾಯಿತು. ಏಕಾಂತದ ರಾಮಯ್ಯ, ಆದಯ್ಯ, ಕೆರೆಯ ಪದ್ಮರಸ, ಹರಿಹರ, ರಾಘವಾಂಕಾದಿಗಳು ತಮ್ಮದೇ ರೀತಿಯ ಸಾಹಿತ್ಯ ರಚನೆಗಳ ಮೂಲಕ ಶರಣಾಂದೋಲನದ ಅಗ್ನಿಜ್ವಾಲೆಯು ಆರಿ ಹೋಗದಂತೆ ಶ್ರಮಿಸಿದರು.

ಅಲ್ಲದೆ ಗುರುರಾಜಕೃತ 'ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ' ಎಂಬ ಗ್ರಂಥದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯರ (೧೨ನೇ ಶತಮಾನದ ಉತ್ತರಾರ್ಧ) ಕಾಲದಲ್ಲಿ ಜನರು ಹಾಡುತ್ತ ವಚನ ಸಾಹಿತ್ಯವನ್ನು ರಕ್ಷಿಸುವುದರ ಮುಖಾಂತರ ಪ್ರಸಾರ ಮಾಡುತ್ತಿದ್ದರೆಂದು ಉಕ್ತವಾಗಿದೆ. ಹೀಗೆ ಎರಡು ಶತಮಾನಗಳಲ್ಲಿ (ವಚನ ರಚನೆಗಳಾಗದಿದ್ದರೂ) ಶರಣರ ಜನಮಾನಸದಲ್ಲಿ ಅವು ಅಚ್ಚಳಿಯದಂತೆ ಉಳಿಯಲು ಅಗತ್ಯವಾದ ರೀತಿಯಲ್ಲಿ ಸಂರಕ್ಷಣೆ ಮಾಡಿದ್ದರಿಂದ ಈ ಕಾಲವನ್ನು 'ಸಂಗೋಪನ ಯುಗ'ವೆಂದು ಕರೆಯಲಾಗಿದೆ.

ಅಂದು ಬಸವಣ್ಣನವರಂತಹ ಮತ್ತೊಬ್ಬ ಧೀಮಂತ ನೇತಾರನನ್ನು ಕಾಣಲಾಗದೆ, ಅಪಾರ ವಚನಸಂಗ್ರಹವನ್ನು ಕಾಪಾಡುವ ಹೊಣೆ ಹೊತ್ತವರು ಅಸಂಖ್ಯಾತ ಹೆಸರಿಸಲಾಗದ ಶರಣರು. ವೀರಶೈವ ಸಾಹಿತ್ಯವನ್ನು ಹಲವಾರು ಅಡ್ಡಿ-ಆತಂಕಗಳ ನಡುವೆ ಸಂರಕ್ಷಿಸಿ ಮುಂದಿನ ತಲೆಮಾರುಗಳಿಗೆ ಆ ಅನುಭಾವಾಮೃತದ ಸವಿಯುಣಿಸಿದವರು ಅವರು.

**ಸಮಕಾಲೀನರು** : ಕರ್ನಾಟಕದಾದ್ಯಂತ ಚದುರಿಹೋಗಿ ಮರೆಯಾದಂತಿದ್ದ ಶರಣರು ಮುಂದೆ ವಿಜಯನಗರ ಸಾಮ್ರಾಜ್ಯದಲ್ಲಿ ಸುರಕ್ಷಿತ ನೆಲೆಯನ್ನು ಕಂಡುಕೊಂಡರು. ಕ್ರಿ.ಶ.೧೩೩೬ರಲ್ಲಿ ಸ್ಥಾಪಿತವಾದ ಆ ಸಾಮ್ರಾಜ್ಯದ ಅರಸರು ಸರ್ವಧರ್ಮಗಳಿಗೂ ಪ್ರೋತ್ಸಾಹವನ್ನಿತ್ತರು. ಪ್ರೌಢದೇವರಾಯನ (ಕ್ರಿ.ಶ.೧೪೨೯-೪೬) ಕಾಲದಲ್ಲಿ ವೀರಶೈವಧರ್ಮವು ಮತ್ತೆ ಹೆಚ್ಚಿನ ಪ್ರಚಾರ-ಪ್ರಸಾರವನ್ನು ಪಡೆಯಿತು.

'ವೀರಶೈವ ಸಮುದ್ಧರಣ ಯುಗ'ವೆಂದು ಹೆಸರಾದ ಅವನ ಸಮಯದಲ್ಲಿ ವಚನವಾಙ್ಮಯವು ವಿಸ್ತೃತರೂಪವನ್ನು ಪಡೆಯಿತು. ಹಿಂದಿನ ವಚನಗಳ ಸಂಗ್ರಹಣ, ಸಂಕಲನ, ವ್ಯಾಖ್ಯಾನಾದಿಗಳು ಭರದಿಂದ ಪ್ರಾರಂಭಗೊಂಡವು. ಪ್ರೌಢದೇವರಾಯನ ಮಂತ್ರಿಯಾದ ಲಕ್ಕಣ್ಣ ದಂಡೇಶನು ಆರುನೂರಕ್ಕೂ ಮಿಗಿಲಾದ ನೂತನ ಶಿವಶರಣರ ಉಲ್ಲೇಖವನ್ನು ಮಾಡಿದ್ದಾನೆ. ಪುರಾತನ ಶರಣರ ಚರಿತ್ರೆಯಲ್ಲದೆ ನೂತನ ಶರಣರ ಚರಿತ್ರೆಗಳು, ಶೈವಪುರಾಣಗಳಿಂದ ಎತ್ತಿ ಕೊಂಡ ಕಥೆಗಳು, ಶಾಸ್ತ್ರೀಯ ಧಾರ್ಮಿಕ ಗ್ರಂಥಗಳ ರಚನೆಯು ಸಾಕಷ್ಟು ಪ್ರಮಾಣದಲ್ಲಿ ನಡೆಯಿತು. ಇದು ಶರಣರ ಚಳವಳಿಯ ಮೂರನೆಯ ಘಟ್ಟವೆನ್ನಬಹುದು.[೧]

ಅಂದಿನ ನೂರೊಂದು ವಿರಕ್ತರು ಕರ್ನಾಟಕದ ಎಲ್ಲೆಡೆ ಸಂಚರಿಸಿ ವೀರಶೈವಧರ್ಮದ ಬಗ್ಗೆ ವ್ಯಾಪಕವಾಗಿ ಜನಜಾಗೃತಿಯನ್ನು ಉಂಟು ಮಾಡಿದರು. ಜೊತೆಗೆ ಚಾಮರಸ, ಕರಸ್ಥಲದ ನಾಗಿದೇವ, ಸಪ್ತಕಾವ್ಯದ ಗುರುಬಸವ, ಬತ್ತಲೇಶ್ವರ ಮೊದಲಾದವರು ಧರ್ಮ ಪ್ರಸಾರದ ಜೊತೆಗೆ ವೀರಶೈವ ಕೃತಿಗಳನ್ನು ರಚಿಸಿದರು. 'ಏಕೋತ್ತರ ಶತಸ್ಥಲ'ದ ಮಹಾಲಿಂಗದೇವ, 'ನೂರೊಂದು ಸ್ಥಲ'ದ ಜಕ್ಕಣ್ಣ ಮೊದಲಾದ ಶರಣರು ವಚನ ಸಂಕಲನ ಕಾರ್ಯವನ್ನು ಕೈಗೊಂಡರು. ಅಲ್ಲದೆ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, (ಸು. ಕ್ರಿ.ಶ. ೧೪೦೦-೩೦) ಹಲಗೆಯದೇವನ ಶೂನ್ಯಸಂಪಾದನೆ, (ಸು. ಕ್ರಿ.ಶ.೧೫೦೦-೩೦), ಗುಮ್ಮಳಾಪುರದ ಸಿದ್ಧಲಿಂಗಯತಿಯ ಶೂನ್ಯ ಸಂಪಾದನೆ (ಸು. ಕ್ರಿ.ಶ. ೧೫೦೦-೨೦) ಮತ್ತು ಗೂಳೂರು ಸಿದ್ಧ — ವೀರಣ್ಣೊಡೆಯನ ಶೂನ್ಯ ಸಂಪಾದನೆ (ಸು. ಕ್ರಿ.ಶ. ೧೫೨೦-೮೦)ಗಳು ಅಂದಿನ ಸ್ತುತ್ಯಾರ್ಹ ಕೃತಿಗಳೆನಿಸಿದವು.

ಕರ್ನಾಟಕದ ಮತ್ತೊಂದೆಡೆ ವೀರಶೈವ ಪುನರುಜ್ಜೀವನದ

೧. ವೀರಶೈವ ಸಂಶೋಧನೆಗಳು – ಡಾ. ಬಿ.ಆರ್. ಹಿರೇಮಠ್, ಪು.೨೪-೨೫

ಪವಿತ್ರಕಾರ್ಯವು ಸಮರೋಪಾದಿಯಲ್ಲಿ ಸಾಗತೊಡಗಿತ್ತು. ಹರದನಹಳ್ಳಿಯ ತೋಂಟದ ಸಿದ್ಧಲಿಂಗೇಶ್ವರರು ಅದರ ಮುಂದಾಳತ್ವವನ್ನು ವಹಿಸಿಕೊಂಡಿದ್ದರು. ಎಡೆಯೂರಿನ ಕಗ್ಗೆರೆಗೆ ಸಮೀಪದಲ್ಲಿರುವ ನಾಗಿಣೀ ನದಿಯ ತೀರದಲ್ಲಿದ್ದ ತೋಟದಲ್ಲಿ ಕೆಲಕಾಲ ತಪವನ್ನಾಚರಿಸಿದ ಅವರು ಎಡೆಯೂರನ್ನು ಧ್ಯಾನಕ್ಷೇತ್ರವನ್ನಾಗಿ ಆಯ್ದುಕೊಂಡಿದ್ದರು. 'ನಿರಂಜನ ಗಣೇಶ್ವರನ ಅಪರಾವತಾರಿ', 'ಷಟ್ಸ್ಥಲಜ್ಞಾನ ಚಕ್ರವರ್ತಿ', 'ಜಂಗಮ ಸಾರ್ವಭೌಮ' ಮೊದಲಾದ ಬಿರುದುಗಳು ಅವರನ್ನು ಅಲಂಕರಿಸಿದ್ದವು.

"ವಿಜಯನಗರದ ಅರಸು ೧ನೆಯ ಶ್ರೀರಂಗರಾಯನು ಕ್ರಿ.ಶ. ೧೫೭೨ರಿಂದ ೧೫೮೫ರವರೆಗೆ ಪೆನುಗೊಂಡೆಯನ್ನು ಆಳಿದನು. ಈ ಅರಸನ ಕಾಲದಲ್ಲಿ ಕರಿತಿಮ್ಮ ಚಿಕ್ಕ ಭೂಪಾಲ ಮಹಾನಾಡ ಪ್ರಭುವಾಗಿ, ಬಿಜ್ಜಾವರ ರಾಜಧಾನಿಯಿಂದ ರಾಜ್ಯಭಾರ ನಡೆಸಿದನು. ಮಹಾನಾಡ ಪ್ರಭು ಕರಿತಿಮ್ಮ ಚಿಕ್ಕಭೂಪಾಲನ ಗುರು ಸಿದ್ಧಲಿಂಗಯತಿಯೆಂಬುದನ್ನು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ತಿಳಿಸುತ್ತದೆ. ಕರಿತಿಮ್ಮ ಚಿಕ್ಕಭೂಪಾಲನಿಗೆ ಈ ಶಿವಯೋಗಿಗಳ ಆಶೀರ್ವಾದದಿಂದ ಹುಟ್ಟಿದ ಮಗ, ಇಮ್ಮಡಿ ಚಿಕ್ಕಭೂಪಾಲ. ಆದುದರಿಂದ ಸಿದ್ಧಲಿಂಗ ಶಿವಯೋಗಿ ಗಳು ೧ನೆಯ ಶ್ರೀರಂಗರಾಯನ ಆಳಿಕೆ ಕಾಲವಾದ ೧೫೭೨ರ ತರುವಾಯ, ಚೆನ್ನಬಸವ ಪುರಾಣದ ಕಾಲವಾದ ೧೫೮೪ರ ಮೊದಲು ಲಿಂಗೈಕ್ಯರಾಗಿರ ಬೇಕು"[೧] ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಎರಡನೆಯ ಗುಬ್ಬಿ ಮಲ್ಲಣಾರ್ಯನ ಮಗನಾದ ಶಾಂತೇಶನು (ಕ್ರಿ.ಶ. ೧೫೬೧) ತನ್ನ 'ಸಿದ್ಧೇಶ್ವರ ಪುರಾಣ'ದಲ್ಲಿ ಸಿದ್ಧಲಿಂಗಯತಿ

೧. ವೀರಶೈವ ಸಂಶೋಧನೆಗಳು — ಡಾ. ಬಿ.ಆರ್. ಹಿರೇಮಠ್ ತೋಂಟದ ಸಿದ್ಧಲಿಂಗಯತಿ ಹಾಗೂ ಗೂಳೂರ ಸಿದ್ಧವೀರಣ್ಣೊಡೆಯರ ಕಾಲ, ಮರು ಪರಿಶೀಲನೆ, ಪು. ೩೦-೩೧

ಗಳನ್ನು ಸ್ತುತಿಸಿದ್ದಾನೆಯೇ ಹೊರತು ಅವರು ಬಯಲಾದ ಬಗ್ಗೆ ತಿಳಿಸಲಿಲ್ಲ. ಆದ್ದರಿಂದ ಕ್ರಿ.ಶ. ೧೫೬೧ರಲ್ಲಿ ಅವರು ಜೀವಿತವಾಗಿದ್ದರೆಂದು ಖಚಿತ ವಾಗುತ್ತದೆ. ಹಲವಾರು ಆಕರಗಳನ್ನು ಪರಿಶೀಲಿಸಿ ಡಾ. ಎಲ್. ಬಸವರಾಜು ರವರು, "ತೋಂಟದ ಸಿದ್ಧಲಿಂಗಯತಿಯ ಜೀವಿತಾವಧಿಯ ಆದಿ-ಅಂತ್ಯಗಳ ವರಿಷ್ಠ ಮಿತಿ ಕ್ರಿ.ಶ. ೧೫೦೦-೧೫೮೮ ಎಂದು ಸದ್ಯಕ್ಕೆ ಸ್ವೀಕರಿಸಬಹುದು"[೧] ಎಂದು ತಿಳಿಸಿದ್ದಾರೆ.

ಗೋಸಲ ಚನ್ನಬಸವೇಶ್ವರರ ಕರಕಮಲಸಂಜಾತರಾದ ಸಿದ್ಧಲಿಂಗೇಶ್ವರರು ತಮ್ಮ ಅಪಾರ ಶಿಷ್ಯ ಸಮೂಹದೊಡನೆ ಕರ್ನಾಟಕದೆಲ್ಲೆಡೆ ಪ್ರವಾಸ ಕೈಗೊಂಡು ವೀರಶೈವಧರ್ಮ ಪ್ರಸಾರವನ್ನು ಮಾಡಿದರು. ಸ್ವತಃ ೭೦೦ಕ್ಕೂ ಮಿಗಿಲಾದ ವಚನಗಳುಳ್ಳ 'ಷಟ್ಸ್ಥಲ ಜ್ಞಾನ ಸಾರಾಮೃತ'ವನ್ನು ರಚಿಸಿದುದಲ್ಲದೆ ಉಳಿದ ಶರಣರು ಸಾಹಿತ್ಯ ಸೇವೆಯನ್ನು ಕೈಗೊಳ್ಳಲು ಪ್ರೋತ್ಸಾಹಿಸಿದರು. 'ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ' ಎಂಬುದು ಅವರ ಅಂಕಿತ.

ಗೂಳೂರು ಸಿದ್ಧವೀರಣಾಚಾರ್ಯ, ಬೋಳ ಬಸವೇಶ್ವರ, ಗುಮ್ಮಳಾಪುರದ ಸಿದ್ಧಲಿಂಗಯತಿ, ಕಟ್ಟಿಗೆಹಳ್ಳಿ ಸಿದ್ಧಲಿಂಗ, ಸ್ವತಂತ್ರ ಸಿದ್ಧಲಿಂಗ, ಕಂಬಳಿಯ ನಾಗಿದೇವ, ಘನಲಿಂಗಿದೇವರು ಅವರ ಪ್ರಮುಖ ಶಿಷ್ಯರೆಂದು ಪರಿಗಣಿತರಾದವರು. ಇಂತಹ ಬೃಹತ್ತಾದ ಶಿಷ್ಯಪರಂಪರೆಯನ್ನು ಸಾಹಿತ್ಯಪ್ರಪಂಚದಲ್ಲಿ ಪಡೆದ ಗುರುವು ಪ್ರಾಯಃ ಅವರೊಬ್ಬರೇ. ಇದನ್ನು ಶರಣ ಚಳವಳಿಯ ನಾಲ್ಕನೆಯ ಘಟ್ಟವೆನ್ನಬಹುದು.

**ಘನಲಿಂಗಿದೇವರ ಗುರುಪರಂಪರೆ** : ಘನಲಿಂಗಿದೇವರು ಮೈಸೂರು ಜಿಲ್ಲೆಯ ನಂಜನಗೂಡಿನಿಂದ ಸುಮಾರು ೧೫ ಕಿ.ಮೀ. ದೂರವಿರುವ, ಕಪಿಲಾ ತೀರದ ಸುತ್ತೂರು ಮಠದ ವೀರಸಿಂಹಾಸನಾಧ್ಯಕ್ಷರಾಗಿದ್ದವರು. ಸುತ್ತೂರು ಮಠದ ಗುರುಪರಂಪರೆಯು ಅನ್ಯಾದೃಶವಾದುದು. ಧಾರ್ಮಿಕ

---

೧. ವಚನಕಾರ ಸಿದ್ಧಲಿಂಗಯತಿ, ಪು. ೧೭-೧೯

ಪ್ರಸಾರ, ನಿತ್ಯ ದಾಸೋಹಾದಿಗಳಲ್ಲದೆ ಸಾಹಿತ್ಯ ಸರಸ್ವತಿಯ ಆರಾಧನೆಯು ಇಲ್ಲಿ ಅವ್ಯಾಹತವಾಗಿ ಸಾಗಿದೆ. ಶ್ರೀಮಠದ ಹಿರಿಯ ಗುರುಗಳಾದ ಶಿವರಾತ್ರೀಶ್ವರರ ಹೆಸರು ಪಂಡಿತಾರಾಧ್ಯರ 'ಗಣಸಹಸ್ರ ನಾಮ'ದಲ್ಲಿ ಉಲ್ಲೇಖವಾಗಿದೆ. ಸಿದ್ಧನಂಜದೇಶಿಕೇಂದ್ರರು 'ಪರಮ ಶಿವಾಧಿಕ್ಯ ಶಿಖಾಮಣಿ'ಯನ್ನು, ಇಮ್ಮಡಿ ಶಿವರಾತ್ರೀಶ್ವರರು 'ವೃಷಭೇಂದ್ರ ವಿಜಯ ಪುರಾಣ'ವನ್ನು, ಚೆನ್ನಬಸವ ಶಿವಾಚಾರ್ಯರು, 'ಚೋಳ ರೇಣುಕ ಸಂವಾದ'ವನ್ನು ರಚಿಸಿ, ವೀರಶೈವ ಧಾರ್ಮಿಕ ಕ್ಷೇತ್ರಕ್ಕೆ ಹಾಗೂ ಕನ್ನಡ ಸಾಹಿತ್ಯಕ್ಕೆ ಅನರ್ಘ್ಯ ಕಾಣಿಕೆಗಳನ್ನು ಇತ್ತಿದ್ದಾರೆ.

ಘನಲಿಂಗಿದೇವರ ಹಿಂದಿನ ಸುತ್ತೂರು ಮಠದ ಪೀಠಾಧಿಪತಿ ಗಳು ಇಂತಿದ್ದಾರೆ :

ಶ್ರೀ ಶ್ರೀ ಶಿವರಾತ್ರೀಶ್ವರ ಭಗವತ್ಪಾದರು

↓

ಈಶಾನ ಈಶ್ವರ ಒಡೆಯರು

↓

ನಿಜಲಿಂಗ ಶಿವಾಚಾರ್ಯರು

↓

ಸಿದ್ಧನಂಜದೇಶಿಕೇಂದ್ರರು

↓

ಕಪಿನೀ ನಂಜುಂಡ ದೇಶಿಕೇಂದ್ರರು

↓

ಚನ್ನವೀರದೇಶಿಕೇಂದ್ರರು

↓

ಸಿದ್ಧಮಲ್ಲ ಶಿವಾಚಾರ್ಯರು
↓
ಪರ್ವತೇಂದ್ರ ಶಿವಾಚಾರ್ಯರು
↓
ಭಂಡಾರಿ ಬಸವಪ್ಪ ಒಡೆಯರು
↓
ಕೂಗಲೂರು ನಂಜುಂಡ ದೇಶಿಕೇಂದ್ರರು

ಘನಲಿಂಗಿದೇವರು ತಮ್ಮ ಹಿಂದಣ ಮೂರು ತಲೆಮಾರಿನ ಗುರು ಪರಂಪರೆಯ ಬಗ್ಗೆ ವಚನದಲ್ಲಿ ತಿಳಿಸಿದ್ದಾರೆ :

ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯದೇವರು,
ಆ ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು
ಕೂಗಲೂರು ನಂಜಯ್ಯದೇವರು.
ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ
ಶರಣವೆಣ್ಣಯ್ಯ ನಾನು !
ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ
ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು. — ವ.೩

ಕಾಲ : ವಿರಕ್ತ ತೋಂಟದಾರ್ಯನು (ಕ್ರಿ.ಶ. ೧೬೧೬) ತನ್ನ 'ಸಿದ್ಧೇಶ್ವರ ಪುರಾಣ' ದಲ್ಲಿ ಸಿದ್ಧಮಲ್ಲದೇಶಿಕೇಂದ್ರರ ಮತ್ತು ಘನಲಿಂಗಿದೇವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾನೆ;

"ನಾಗಕಂಕಣನೆ ಸಮರೂಪನೆಂದೆನಿಸಿ ಸಲೆ
ಪೂಗಣೆಯನ್ನುತಿಕೆಯಿಂ ಬಗೆಗೊಡದ ಕೃಪಾಸಾಗರಂ
ಸುತ್ತೂರ ಸಿದ್ಧಮಲ್ಲೇಶನೇ ಕಾಣೆ ಪೆಂಡಿರ ತಲೆವಣೆ"
"ಉರೆ ಕೃಷ್ಣ ಕಂಬಳವ ಪೊದೆದುತ್ತಮಾಂಗವಂ

ನೆರೆ ಮುಂಡಿತಂ ಗೆಯ್ದು ಕರತಳದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಶ್ಚಳ ವಿರತನೀತನಾರ್?
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರ ಸಾರ್ದು ಸುಜ್ಞಾನಮಾರ್ಗದೊಳು ನಿಂದು ಗುಣ
ಕರಿಗೊಂಡ ಘನಲಿಂಗದೇವನೇ ಕಾಣೆ" ೧೫-೪೬

'ಕಪ್ಪು ಕಂಬಳಿಯನ್ನು ಎದೆಗೆ ಹೊದ್ದುಕೊಂಡು ಶಿರಸ್ಸನ್ನು ಮುಂಡನ ಮಾಡಿಸಿಕೊಂಡು, ಕರಸ್ಥಳದ ಲಿಂಗದಲ್ಲಿ ಕೌತುಕದೃಷ್ಟಿಯುಳ್ಳ, ಬಾಹ್ಯ ಸ್ಥಿತಿಯನ್ನು ಅರಿಯದ ನಿಶ್ಚಲ ವಿರಾಗಿಯಾದ ಈತನಾರು? ದೇಹದ ಉಪಾಧಿಯನ್ನು ನೀಗಿ, ಅರಿಷಡ್ವರ್ಗಕ್ಕೆ ವಶನಾಗದೆ, ಸುಜ್ಞಾನಪಥದಲ್ಲಿ ಸಾಗುತ್ತ, ಗುಣನಿಧಿಯಾದ ಘನಲಿಂಗಿದೇವನೇ ಈತನು' ಎಂದು ವಿರಕ್ತ ತೋಂಟದಾರ್ಯನು ಘನಲಿಂಗಿದೇವರ ಬಾಹ್ಯಸ್ವರೂಪವನ್ನು ವರ್ಣಿಸಿದ್ದಾನೆ. 'ತುಮಕೂರಿನಲ್ಲಿ ತೋಂಟದ ಸಿದ್ಧಲಿಂಗಯತಿಗಳ ಪಲ್ಲಕ್ಕಿಯ ಮೆರವಣಿಗೆಯನ್ನು ಭಕ್ತಾದಿಗಳು ಬಹು ವಿಜೃಂಭಣೆಯಿಂದ ನಡೆಸಿದರು. ಆಗ ಸಿದ್ಧಲಿಂಗಯತಿಗಳೊಡನೆ ಇದ್ದ ಶಿಷ್ಯರಲ್ಲಿ ಸಿದ್ಧಮಲ್ಲ ದೇಶಿಕೇಂದ್ರರು, ಘನಲಿಂಗಿದೇವರು, ಚಂದ್ರಶೇಖರಗುರು, ಬೋಳಬಸವ ದೇವ ಮೊದಲಾದವರು ಪ್ರಮುಖ ಪಾತ್ರ ವಹಿಸಿದ್ದರು' ಎಂದು ವಿರಕ್ತ ತೋಂಟದಾರ್ಯನು ಮೇಲಿನ ವರ್ಣನೆಯ ಸಮಯದಲ್ಲಿ ವಿವರಿಸಿದ್ದಾನೆ.

ವಿರೂಪಾಕ್ಷಪಂಡಿತನು (ಕ್ರಿ.ಶ.೧೫೮೪) 'ಚನ್ನಬಸವಪುರಾಣ'ದಲ್ಲಿ ಘನಲಿಂಗಿದೇವರು ಸಿದ್ಧಲಿಂಗಯತಿಗಳ ಶಿಷ್ಯವರ್ಗಕ್ಕೆ ಸೇರಿದವ ರೆಂದು ಉಲ್ಲೇಖಿಸಿದ್ದಾನೆ:

ಸಿದ್ಧಮಲ್ಲೇಶ್ವರಂ ಗುಮ್ಮಳಾಪುರದ ವರ
ಸಿದ್ಧಲಿಂಗೇಶ್ವರ ಯೆಡತೊರೆಯ ಪುರದ ಗುರು
ಸಿದ್ಧವೀರಣ್ಣೊಡೆಯರೆಸೆವ ಘನಲಿಂಗದೇವರ್ ಚಿಕ್ಕ ಮಲ್ಲೇಶನು
— ೬೩-೪೭

ಫ.ಗು. ಹಳಕಟ್ಟಿಯವರು ಸಂಪಾದಿಸಿರುವ 'ನಿರಂಜನವಂಶರತ್ನಾಕರ'